ಅ.ದಾ.ನಂ.496/2013
ಪಿ.ಡಬ್ಲೂ.:1

**<u>ಸಾಕ್ಷಿಯನ್ನು ಇಂದು ದಿನಾಂಕಃ 05.02.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**

**<u>ಮುಂದುವರೆದ ಪಾಟೀ ಸವಾಲುಃ ಎ ಎಸ್ ಕೆ, ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ</u>**

9. ನನ್ನ ಅಜ್ಜನಿಗೆ ಮಸೂತಿ ಗ್ರಾಮದಲ್ಲಿ ಒಂದು ಮನೆ ಇತ್ತು. ಸದರಿ ಮನೆಯನ್ನು ಲಕ್ಷ್ಮಣನ ಮಕ್ಕಳು ಮಾರಾಟ ಮಾಡಿರುತ್ತಾರೆ. ಸದರಿ ಮನೆಯನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುವುದರಿಂದ ಪ್ರತಿವಾದಿಗಳ ಮನೆಯಲ್ಲಿ ಏನೂ ಆಗುತ್ತದೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಮಾರಾಟ ಮಾಡುವ ಸಮಯದಲ್ಲಿ ನನ್ನ ತಂದೆಯು ದನ ಕಾಯುತ್ತಿದ್ದನು. ನನ್ನ ತಂದೆಯು ನನಗೆ ಮತ್ತು 6 ನೇ ಪ್ರತಿವಾದಿಗೆ ತಲಾ ಒಂದೊಂದು ಎಮ್ಮೆಗಳನ್ನು ನಮಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಮಾರಾಟ ಮಾಡಿರುವ ಹಣದ ಕುರಿತು 3 ಮತ್ತು 4 ನೇ ಪ್ರತಿವಾದಿಗಳು ತಂಟೆ ತಕರಾರು ಮಾಡಿದ್ದರು ಸಾಕ್ಷಿಯು 3 ನೇ ಪ್ರತಿವಾದಿಯೇ ಎಲ್ಲಾ ಹಣವನ್ನು ಪಡೆದಿರುತ್ತಾರೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯೇ ಎಲ್ಲಾ ಹಣವನ್ನು ಪಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯ ಮಾರಿರುವ ಹಣವನ್ನು ಯಾರಿಗೂ ಬೇಡ ಎಂದು ಹೇಳಿ ಸದರಿ ಹಣವನ್ನು 5 ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

10. ನಾನು ನನ್ನ ಗಂಡನ ಮನೆಯಲ್ಲಿ ಇರುವುದರಿಂದ ದಾವಾ ಆಸ್ತಿಯಲ್ಲಿ ಏನೂ ಬೆಳೆಯುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಸುಮಾರು 20 ವರ್ಷಗಳಿಂದ ಉಳುಮೆ ಮಾಡುತ್ತಿರುತ್ತಾರೆ. ಸದರಿ ಜಮೀನುಗಳಿಂದ

ಬಂದ ಆದಾಯವನ್ನು 3 ಮತ್ತು 4ನೇ ಪ್ರತಿವಾದಿಗಳೆ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ನಾನು 3 ಮತ್ತು 4ನೇ ಪ್ರತಿವಾದಿಗಳಿಗೆ ಜಮೀನುಗಳಲ್ಲಿ ಬೆಳೆದಿರುವ ಆದಾಯವನ್ನು ಕೇಳಿರುವುದಿಲ್ಲ.

11. ನನ್ನ ತಂದೆಯು ಮೃತ ಪಡುವ ಸಮಯದಲ್ಲಿ ಆರಾಮ ಆಗಿ ಇದ್ದರು ಎಂದರೆ ಸರಿ. ನನ್ನ ತಂದೆಯು ಯಾವುದೇ ಒಂದು ಸಹಿಯನ್ನು ಮಾಡಬೇಕಾದರೆ ನೋಡಿಯೇ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಯು ಸುಮಾರು 4 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನನ್ನ ತಂದೆಯು ಸಹಿ ಮಾಡುತ್ತಿದ್ದರು. ನನ್ನ ತಂದೆ ಮತ್ತು ಚನ್ನಪ್ಪ ಶಿವಪ್ಪ ಸಾಳಹಳ್ಳಿರವರುಗಳು ಒಳ್ಳೆಯ ಸಂಬಂಧ ಹೊಂದಿದ್ದರು ಎಂದರೆ ಸರಿಯಲ್ಲ. ಚನ್ನಪ್ಪ ಶಿವಪ್ಪ ಸಾಲಹಳ್ಳಿರವರು ನನ್ನ ತಾಯಿಗೆ ಅಣ್ಣನಾಗಬೇಕು. 3ನೇ ಪ್ರತಿವಾದಿಯ ಹೆಂಡತಿಯ ತಂದೆಯ ಹೆಸರು ಚನ್ನಪ್ಪ ಇರುತ್ತದೆ. ನಾವುಗಳು ನಮ್ಮ ಸಂಬಂಧಿಕರೊಂದಿಗೆ ಚೆನ್ನಾಗಿ ಇದ್ದೆವು ಎಂದರೆ ಸರಿ.

12. ಈ ದಾವೆಯನ್ನು ಸಲ್ಲಿಸಲು 3ನೇ ಪ್ರತಿವಾದಿಯೇ ಮಾಹಿತಿ ಕೊಟ್ಟಿರುತ್ತಾನೆ. ಸಾಕ್ಷಿಯು ಮುಂದುವರೆದು ನಾವು ಕೂಡಾ ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ನನ್ನ ತಂದೆಯು ಮೃತ ಪಟ್ಟ ನಂತರ ನನ್ನ ತವರು ಮನೆಗೆ ಬಂದಿರುತ್ತೇನೆ ಎಂದರೆ ಸಾಕ್ಷಿಯು ನನ್ನ ತಂದೆಯು ಮರಣ ಹೊಂದುವ ಎರಡು ದಿನಗಳ ಪೂರ್ವದಲ್ಲಿ ನಾನು ನನ್ನ ತವರು ಮನೆಗೆ ಬಂದಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆಯ ಅಂತ್ಯ ಸಂಸ್ಕಾರವನ್ನು ನಾವು ಮತ್ತು ಸಹೋದರರು ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಮತ್ತು ಸಹೋದರಿಯರು ನನ್ನ ತಂದೆಯ ಅಂತ್ಯ ಸಂಸ್ಕಾರವನ್ನು ಮಾಡಿರುತ್ತೇವೆ ಎಂದು ಹೇಳುತ್ತಾರೆ.

13. ನನ್ನ ತಂದೆಯು ಮನೆಯನ್ನು ಮಾರಾಟ ಮಾಡಿದ ನಂತರ ಸರ್ಕಾರದಿಂದ ಮನೆ ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ಸರ್ಕಾರದಿಂದ ಮಂಜೂರಾದ ಮನೆಯಲ್ಲಿ 2,3 ಮತ್ತು 4ನೇ ಪ್ರತಿವಾದಿಗಳು ವಾಸ ಇರುತ್ತಾರೆ ಎಂದರೆ ಸಾಕ್ಷಿಯು 3 ಮತ್ತು 4ನೇ ಪ್ರತಿವಾದಿಗಳು ಸದರಿ ಮನೆಯಲ್ಲಿ ವಾಸವಾಗಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಾಯಿಯು ಮುದಕಣ್ಣ ಎಂಬುವವರ ಮನೆಯಲ್ಲಿ ಬಾಡಿಗೆ ಇರುತ್ತಾರೆ. ನನ್ನ ತಾಯಿಯ ಸದರಿ ಮುದಕಣ್ಣನಿಗೆ ಯಾವುದೇ ಬಾಡಿಗೆ ಹಣವನ್ನು ಕೊಡುವುದಿಲ್ಲ. ನನ್ನ ತಾಯಿಯು ಮುದಕಣ್ಣನ ಮನೆಯಲ್ಲಿ ಬಾಡಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3ನೇ ಪ್ರತಿವಾದಿಯ ಮನೆಯ ಪಕ್ಕದಲ್ಲಿರುವ ಮನೆಯಲ್ಲಿ ವಾಸಾವಾಗಿರುತ್ತಾರೆ ಎಂದು ಹೇಳುತ್ತಾರೆ.

14. ನನ್ನ ತಂದೆಯು ದಿಃ 12.12.2019 ರಂದು 3ನೇ ಪ್ರತಿವಾದಿಗೆ ದಾವಾ ಆಸ್ತಿಗಳ ಕುರಿತು ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಿರಿಯರ ಆಸ್ತಿಗಳನ್ನು ಮಾರಾಟ ಮಾಡಿ ನನ್ನ ಮತ್ತು 5 ಮತ್ತು 6ನೇ ಪ್ರತಿವಾದಿಗಳ ಮದುವೆ ಮಾಡಿ ಕೊಟ್ಟಿದ್ದಕ್ಕಾಗಿ ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದು ನಮ್ಮ ತಂದೆಯು ನಮಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ನಮಗೆ ಹೇಳಿದ ನಂತರ ನನ್ನ ತಾಯಿಯು ನನ್ನ ತಂದೆಗೆ ಹೊಡೆದಿರುತ್ತಾಳೆ ಎಂದರೆ ಸರಿಯಲ್ಲ. ನಾನು ಮತ್ತು 4ನೇ ಪ್ರತಿವಾದಿ ಒಳ್ಳೆಯ ಸಂಬಂಧ ಹೊಂದಿರುತ್ತೇವೆ ಎಂದರೆ ಸಾಕ್ಷಿಯು 3 ಮತ್ತು 4ನೇ ಪ್ರತಿವಾದಿಯರು ಇಬ್ಬರೂ ಅಷ್ಟೇ ಎಂದು ಹೇಳುತ್ತಾರೆ.

15. ದಾವಾ ಆಸ್ತಿಗಳು ಸಾಲಹಳ್ಳಿರವರ ಮನೆತನದ ಆಸ್ತಿಗಳಾಗಿರುವುದರಿಂದ ಮತ್ತು 3ನೇ ಪ್ರತಿವಾದಿಯು ಸಾಲಹಳ್ಳಿರವರ ಮನತೆನದ ಹೆಣ್ಣು ಮಗಳನ್ನು ಮದುವೆ ಮಾಡಿಕೊಂಡಿರುವುದರಿಂದ

ದಾವಾ ಆಸ್ತಿಗಳು 3 ನೇ ಪ್ರತಿವಾದಿಗೆ ತಲುಪಬೇಕೆಂದು ನಮಗೆ ಹೇಳುತ್ತಿದ್ದನು ಎಂದರೆ ಸರಿಯಲ್ಲ. ನನ್ನ ತಂದೆಯು ಹೇಳಿರುವ ಸಿಟ್ಟಿನಿಂದ ನಾವು ಮತ್ತು ಉಳಿದ ಪ್ರತಿವಾದಿಯರು ಸೇರಿ 3 ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಾಲಹಳ್ಳಿರವರ ಮನೆತನದ ಆಸ್ತಿಗಳು ಸಾಲಹಳ್ಳಿರವರಿಗೆ ಹೋಗಬಾರದೆಂದು ಎಂಬ ಉದ್ದೇಶದಿಂದ ನಾವು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1,2,4 ರಿಂದ 6 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು, ಸದರಿ ಪ್ರತಿವಾದಿಗಳು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ 1,2,4 ರಿಂದ 6 ನೇ ಪ್ರತಿವಾದಿಗಳು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ **ಹೆಚ್ಚುವರಿ ಸಿವಿಲ್**
**ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**